ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 19/07/2019

# ವಿಧಾನಸಭೆಯಲ್ಲಿ ಬಿಜೆಪಿ ರಾತ್ರಿ ಧರಣಿ



ವಿಧಾನಸಭೆ ಮೊಗಸಾಲೆಯಲ್ಲಿ ಬಿಜೆಪಿ ಶಾಸಕರ ಧರಣಿ

**ಬೆಂಗಳೂರು:** ವಿಶ್ವಾಸಮತ ಯಾಚನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸದೆ ಸದನವನ್ನು ಮುಂದೂಡುವ ಹಿಂದೆ ಆಡಳಿತ ಪಕ್ಷದ ಕೈವಾಡವಿದೆ ಎಂದು ಆರೋಪಿಸಿ ಬಿಜೆಪಿ ಸದಸ್ಯರು ವಿಧಾನಸಭೆ ಮೊಗಸಾಲೆಯಲ್ಲೇ ಗುರುವಾರ ರಾತ್ರಿ ಧರಣಿ ನಡೆಸಿದರು.

ಪ್ರತಿಪಕ್ಷನಾಯಕ ಯಡಿಯೂರಪ್ಪ, ಉಪನಾಯಕ ಆರ್.ಅಶೋಕ್ ಸಹಿತ ಪಕ್ಷದ ಎಲ್ಲ ಶಾಸಕರು ಅಹೋರಾತ್ರಿ ಧರಣಿಯಲ್ಲಿ ಪಾಲ್ಗೊಂಡರು. ವಿಧಾನ ಸಭೆ ಸಚಿವಾಲಯವು ಶಾಸಕರಿಗೆ ರಾತ್ರಿ ಊಟ ಸರಬರಾಜು ಮಾಡಿತು. ಸ್ಪೀಕರ್ ಸೂಚನೆಯಂತೆ ಮಲಗಲು ದಿಂಬು, ಬೆಡ್‌ಶೀಟ್‌ನ್ನು ಒದಗಿಸಿ ಕೊಡಲಾಯಿತು.

ಊಟದ ಬಳಿಕ ವಿಶ್ವಾಸಮತ ಯಾಚನೆ ಕುರಿತು ಹಿರಿಯ ಶಾಸಕರಿಂದ ಚಿಂತನ-ಮಂಥನವೂ ನಡೆಯಿತು. ಶುಕ್ರವಾರ ಸಮ್ಮಿಶ್ರ ಸರಕಾರ ಪತನಗೊಂಡು ಒಂದೆರಡು ದಿನಗಳಲ್ಲಿ ಹೊಸ ಸರಕಾರ ರಚನೆ ಕುರಿತು ಬಿಸಿ ಬಿಸಿ ಚರ್ಚೆ ನಡೆದು ಮಧ್ಯರಾತ್ರಿ ಬಳಿಕ ಶಾಸಕರು ನಿದ್ರೆಗೆ ಜಾರಿದರು. ಶಾಸಕರ ಜತೆ ಸಚಿವಾಲಯದಲ್ಲಿರುವ ವೈದ್ಯ ಸಿಬ್ಬಂದಿ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.